ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸಂಡೂರು.

ಸಿ. ಸಿ. ಸಂಖ್ಯೆ **1065/2012** ಪಿ.ಡಬ್ಲೂ **01**

| | | |
|---|---|---|
| ಸಾಕ್ಷಿಯ ಹೆಸರು | - ಕೆ. ಅಂಕಲೇಶ | ದಿನಾಂಕ 30-01-2023 ರಂದು ಪ್ರಮಾಣ ವಚನ ಮಾಡಿಸಲಾಯಿತು. |
| ತಂದೆಯ ಹೆಸರು | - ರಾಮಪ್ಪ | |
| ವಯಸ್ಸು | - 53 ವರ್ಷ | |
| ಉದ್ಯೋಗ | - ಎ.ಎಸ್.ಐ ತೋರಣಗಲ್ಲು ಪೋಲಿಸ ಠಾಣೆ | |
| ವಾಸ ಸ್ಥಳ | - ತೋರಣಗಲ್ಲು | |

**ಕಲಂ 299 ರಡಿಯಲ್ಲಿ ಮುಖ್ಯ ವಿಚಾರಣೆ ಸಸಅ ರವರಿಂದ**

* * * *

ನಾನು ದಿಃ **09-06-2022** ರಿಂದ ಇಲ್ಲಿಯವರೆಗೆ ನಾನು ತೋರಣಗಲ್ಲು ಪೋಲಿಸ ಠಾಣೆಯಲ್ಲಿ ಎ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೆನೆ.

ನಾನು ಸದರಿ ಪ್ರಕರಣದಲ್ಲಿ **1** ಮತ್ತು **2** ನೇ ಆರೋಪಿಯ ವಿರುದ್ದ ಹೊರಡಿಸಿದ ಉದ್ಘೋಷಣಾ ವಾರೆಂಟನ್ನು ಪಡೆದುಕೊಂಡು ಜಾರಿ ಮಾಡಲು ಆರೋಪಿಯ ತಾತ್ಕಾಲಿಕ ವಿಳಾಸವಾದ ಚಿಕ್ಕಹಂತಾಪುರ ಗ್ರಾಮದ ಪದ್ಮಾವತಿ ಫೇರಸ್ ಲಿ.ಕಂಪನಿಯ ಲೇಬರ ಕಾರ್ಖಾನೆಯ ಕಂಪನಿಯ ಲೀಗಲ್ ಅಡ್ವಾಯ್ಸರ್ ಅದ ಪಂಕಜ ಶರ್ಮಾ ಅವರನ್ನು ವಿಚಾರಸಿ ಅವರಿಗೆ ವಾರೆಂಟ ಪ್ರತಿಯನ್ನು ನೀಡಿದಾಗ ಅವರು ಸದರಿ ಆರೋಪಿತ ಇಲ್ಲಿ ವಾಸವಾಗಿರುವುದಿಲ್ಲ ಹಾಗೂ ಈಗ ಎಲ್ಲಿ ವಾಸಮಾಡುತ್ತಾನೆ ಎಂದು ಗೊತ್ತಿರುವುದಿಲ್ಲ ಎಂದು ತಿಳಿಸಿದರು. ನಂತರ ಸದರಿ ವಾರೆಂಟನ ಪ್ರತಿಯನ್ನು ಕಂಪನಿಯ ಮುಖ್ಯ ದ್ವಾರದ ಗೇಟಗೆ ಅಂಟಿಸಿರುತ್ತೇನೆ. ನಂತರ ದೊಡ್ಡ ಹಂತಾಪುರ ಗ್ರಾಮದ ಪಂಚಾಯ್ತಿ ಅಧಿಕಾರಿ ಅವರಿಗೆ ವಿಚಾರಿಸಲಾಗಿ ಅವರು **1** ನೇ ಆರೋಪಿತನ ಹೆಸರಿನವರು ನಮ್ಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಇರುವುದಿಲ್ಲ ಎಂದು ಮತ್ತು ಅವರ ಹೆಸರಿನಲ್ಲಿ ಯಾವುದೆ ಆಸ್ತಿ ಇರುವುದಿಲ್ಲ ಎಂದು ತಿಳಿಸಿರುತ್ತಾರೆ. ನಂತರ ಪಂಚಾಯ್ತಿಯ ಬಾಗಿಲಿಗೆ ಉದ್ಘೋಷಣಾ ವಾರೆಂಟನ ಪ್ರತಿಯನ್ನು ಅಂಟಿಸಿರುತ್ತೇನೆ. ನಂತರ ಚಿಕ್ಕಹಂತಾಪುರ ಗ್ರಾಮದಲ್ಲಿ ಡಂಗೊರ ಸಹ ಹೊಡೆಸಿರುತ್ತೇವೆ. ಸಾಕ್ಷಿಯು ಉದ್ಘೋಷಣಾ ವಾರೆಂಟನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ **1** ಎಂದು, ಪದ್ಮಾವತಿ ಕಂಪನಿ ಹತ್ತಿರ ತೆಗೆದ ಪೋಟೊವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ **2** ಎಂದು, ಹಂತಾಪುರ ಪಂಚಾಯ್ತಿ ಹತ್ತಿರ ತೆಗೆದ ಪೋಟೊವನ್ನು ನಿಪಿ **3** ಎಂದು ಗುರುತಿಸಲಾಯಿತು.

ನಂತರ 1ನೇ ಆರೋಪಿ ಖಾಯಂ ವಿಳಾಸವಾದ ರಾಮಘಡ ಜಿಲ್ಲಾ ಓ್ರಮಂಚಿ ಠಾಣಾ ಏರಿಯಾ ಜಾರಖಂಡ ರಾಜಕ್ಕೆ ಹೋಗಿದ್ದು ಸದರಿ ವಿಳಾಸದ ಪೋಲಿಸ ಠಾಣೆಗೆ ಹೋಗಿ ಠಾಣಾ ಎಸ್.ಹೆಚ್.ಓ ಅವರನ್ನು ವಿಚಾರಿಸಲಾಗಿ ಸದರಿ ಠಾಣಾ ಏರಿಯಾದಲ್ಲಿ ಉದ್ಘೋಷಣಾ ವಾರೆಂಟನ್ನು ನಮೂದಿಸಿದ ವ್ಯಕ್ತಿ ಇರುವುದಿಲ್ಲ ಎಂದು ತಿಳಿಸಿರುತ್ತಾರೆ. ವಾರೆಂಟನ ಪ್ರತಿಯನ್ನು ಠಾಣೆಗೆ ನೀಡಿ ಸದರಿ ಆರೋಪಿ ಬಗ್ಗೆ ಮಾಹಿತಿ ಸಿಕ್ಕಲ್ಲಿ ತಿಳಿಸುವಂತೆ ಹೇಳಿ ಸ್ಥಳದಲ್ಲಿ ಒಂದು ಪೋಟೋವನ್ನು ಸಹ ತೆಗೆದಿರುತ್ತೇವೆ. ಸದರಿ ಪೋಟೋವನ್ನು ನಿಪಿ 4 ಎಂದು ಗುರುತಿಸಲಾಯಿತು. ನಂತರ ಸದರಿ ಏರಿಯಾದಲ್ಲಿ ಡಗೂರವನ್ನು ಸಹ ಹಾಕಿಸಿರುತ್ತೇವೆ. ನಂತರ ರಾಮಘಡ ಜಿಲ್ಲೆಯ ಕೇಂದ್ರ ಸ್ಥಾನದಲ್ಲಿ ನಗರ ಪೋಲಿಸ ಠಾಣೆಯಲ್ಲಿ ಠಾಣಾ ಎಸ್.ಹೆಚ್.ಓ ಅವರಿಗೆ ವಾರೆಂಟನ ಪ್ರತಿಯನ್ನು ನೀಡಿ ಆರೋಪಿತರಿಗೆ ವಿಚಾರಿಸಿದಾಗ ಸದರಿ ವ್ಯಕ್ತಿಗಳು ನಮ್ಮ ಜಿಲ್ಲೆಯಲ್ಲಿ ವಾಸವಿರುವುದಿಲ್ಲ ಎಂದು ತಿಳಿಸಿರುತ್ತಾರೆ. ನಂತರ ಸದರಿ ಠಾಣೆಯ ಹತ್ತಿರ ಒಂದು ಪೋಟೋವನ್ನು ಸಹ ತೆಗೆದಿರುತ್ತೇವೆ. ಸದರಿ ಪೋಟೋವನ್ನು ನಿಪಿ 5 ಎಂದು ಗುರುತಿಸಲಾಯಿತು. ನಂತರ ರಾಮಘಡ ನಗರದ ಆರ್.ಟಿ.ಓ ಕಚೇರಿಗೆ ಹೋಗಿ 1ನೇ ಆರೋಪಿಯ ಡಿ.ಎಲ್ ವಿಚಾರಿಸಲಾಗಿ ಅವರು ಸದರಿ ಆರೋಪಿಯ ಹೆಸರಿನಲ್ಲಿ ಯಾವುದೆ ಡಿ.ಎಲ್ ನಮ್ಮ ಕಚೇರಿಯಲ್ಲಿ ಇರುವುದಿಲ್ಲ ಎಂದು ಪತ್ರವನ್ನು ನೀಡಿರುತ್ತಾರೆ. ಸದರಿ ಪತ್ರವನ್ನು ನಿಪಿ 6 ಎಂದು ಗುರುತಿಸಲಾಯಿತು. ನಂತರ ರಾಮಘಡ ಜಿಲ್ಲಾ ಮ್ಯಾಜಿಸ್ಟ್ರೇಟ್ ಅವರಿಗೆ ಆರೋಪಿತರ ಹೆಸರಿನಲ್ಲಿ ಯಾವುದಾದರ ಚರ ಮತ್ತು ಸ್ಥಿರ ಆಸ್ತಿಗಳು ಇದ್ದಲ್ಲಿ ತಿಳಿಸುವಂತೆ ಕೋರಿ ಪತ್ರವನ್ನು ನೀಡಿರುತ್ತೇನೆ. ಸದರಿ ಪತ್ರವನ್ನು ನಿಪಿ 7 ಎಂದು ಗುರುತಿಸಲಾಯಿತು. ನಂತರ ದಿಃ 13-01-2023 ರಂದು ರಾಮಘಡ ಮ್ಯಾಜಿಸ್ಟ್ರೇಟ್ ಆರೋಪಿಯ ಹೆಸರಿನಲ್ಲಿ ಯಾವುದೆ ಆಸ್ತಿ ಇಲ್ಲ ಎಂದು ಪತ್ರವನ್ನು ಬರೆದಿರುತ್ತಾರೆ. ಸದರಿ ಪತ್ರವನ್ನು ನಿಪಿ 8 ಎಂದು ಗುರುತಿಸಲಾಯಿತು.

ಸದರಿ ಪ್ರಕರಣ 2ನೇ ಆರೋಪಿತನ ವಿರುದ್ದ ಸಹ ಉದ್ಘೋಷಣಾ ವಾರೆಂಟನ್ನು ಮಾನ್ಯ ನ್ಯಾಯಾಲಯ ಹೊರಡಿಸಿದ್ದು 2ನೇ ಆರೋಪಿತನು ತಾತ್ಕಾಲಿಕವಾಗಿ 1ನೇ ಆರೋಪಿ ವಾಸವಿದ್ದ ಚಿಕ್ಕಹಂತಾಪುರ ಗ್ರಾಮದಲ್ಲಿರುವ ಪದ್ಮಾವತಿ ಕಂಪನಿಗೆ ಹೋಗಿ ವಿಚಾರಿಸಿದಾಗ 1ನೇ ಅರೋಪಿಯ ವಿಚಾರಣೆ ಮಾಡುವ ಸಮಯದಲ್ಲಿ 2ನೇ ಆರೋಪಿಯ ಬಗ್ಗೆ ವಿಚಾರಣೆ ಮಾಡಿ ಇಬ್ಬರೂ ಆರೋಪಿಗಳ ಉದ್ಘೋಷಣಾ ವಾರೆಂಟನ್ನು ಸದರಿ ಕಂಪನಿಯ ಗೇಟ್‌ಗೆ ಅಂಟಿಸಿ ಬಂದಿರುತ್ತೇನೆ. ಪದ್ಮಾವತಿ ಕಂಪನಿಯವರು ನೀಡಿದ ಪತ್ರವನ್ನು ನಿಪಿ 9 ಎಂದು ಗುರುತಿಸಲಾಯಿತು. ಮತ್ತು ಹಂತಾಪುರ ಗ್ರಾಮದವರು ನೀಡಿದ ಪತ್ರವನ್ನು ನಿಪಿ 10 ಎಂದು ಗುರುತಿಸಲಾಯಿತು. ನಂತರ 2ನೇ ಆರೋಪಿಯ ಖಾಯಂ ವಿಳಾಸವಾದ ವಾರ್ಡ ನಂಬರ 20

ಔರಂಗಾಬಾದ್ ಪೋಸ್ಟ್ ಬಿಹಾರ ರಾಜ್ಯಕ್ಕೆ ಹೋಗಿ ಔರಂಗಾಬಾದ್ ನಗರ ಠಾಣೆಯ ಉದ್ಘೋಷಣಾ ವಾರೆಂಟನ ಪ್ರತಿಯನ್ನು ಠಾಣಾ ಪಿ.ಎಸ್.ಐ ಅವರಿಗೆ ನೀಡಿದ್ದು ಅವರು ತಮ್ಮ ಇಲಾಖೆಯ ಜೀಪ್ ನಲ್ಲಿ ಸದರಿ ಏರಿಯಾಗೆ ಹೋಗಿ ವಿಚಾರಿಸಿದಾಗ 2 ನೇ ಅರೋಪಿತ ಸುಮಾರು 9 ವರ್ಷಗಳ ಹಿಂದೆ ಮನೆಯನ್ನು ಮಾರಿಕೊಂಡು ಹೋಗಿರುತ್ತಾನೆ ಎಂದು ಮತ್ತು ಈಗ ಎಲ್ಲಿ ಇರುತ್ತಾನೆ ಎಂದು ಗೊತ್ತಿರುವುದಿಲ್ಲ ಎಂದು ಸ್ಥಳಿಯರು ತಿಳಿಸಿರುತ್ತಾರೆ. ನಂತರ ವಾರೆಂಟನ ಪ್ರತಿಯನ್ನು ಠಾಣಾ ಮಾರ್ಡ್ ಸೂಚನಾ ಫಲಕಕ್ಕೆ ಅಂಟಿಸಿ ಪೋಟೊವನ್ನು ತೆಗೆದಿರುತ್ತೇನೆ. ಸದರಿ ಪೋಟೊವನ್ನು ನಿಪಿ 11 ಎಂದು ಗುರುತಿಸಲಾಯಿತು. ನಂತರ ಆರೋಪಿಯ ವಿರುದ್ದ ಕಲಂ 83 ಸಿ.ಅರ್.ಸಿ ಸಿ ಅಡಿಯಲ್ಲಿ ಹೊರಡಿಸಿದ್ದ ವಾರೆಂಟನ್ನು ಔರಂಗಾಬಾದ್ ಜಿಲ್ಲಾ ಮ್ಯಾಜಿಸ್ಟೈಟ ಅವರಿಗೆ ಸಲ್ಲಿಸಿರುತ್ತೆನೆ. ಅವರು ಪರೀಶಿಲಿಸಿ ವರದಿ ಕೊಡುವುದಾಗಿ ತಿಳಿಸಿರುತ್ತಾರೆ. ನಂತರ ದಿಃ 18-01-2023 ರಂದು ಸದರಿ ಮ್ಯಾಜಸ್ಟೈಟ ಅವರು 2 ನೇ ಆರೋಪಿಯ ಹೆಸರಿನಲ್ಲಿ ಯಾವುದೆ ಆಸ್ತಿಗಳು ಇರುವುದಿಲ್ಲ ಎಂದು ವರದಿಯನ್ನು ಪತ್ರದ ಮೂಲಕ ತಿಳಿಸಿರುತ್ತಾರೆ. ಸದರಿ ಪತ್ರವನ್ನು ನಿಪಿ 12 ಎಂದು ಗುರುತಿಸಲಾಯಿತು. ನಂತರ ಔರಂಗಾಬಾದ್‌ನಲ್ಲಿ ಬೈಕ್ ಮೇಕ್ಯಾನಿಕ ಅವರಿಗೆ ಆರೋಪಿಯ ಬಗ್ಗೆ ವಿಚಾರಿಸಿದಾಗ 2 ನೇ ಆರೋಪಿಯ ತಂದೆ ಮಹೊಮ್ಮದ ಇಸಾಲಂ ಎನ್ನುವರು ಬಡ್ಡಿಕಲಾಗ್ರಾಮ, ಮರೂಂಗ ಪೋಲಿಸ ಠಾಣಾ ಏರಿಯಾ ಔರಂಗಾಬಾದ್ ಜಿಲ್ಲೆಯಲ್ಲಿ ಇರುವ ಬಗ್ಗೆ ಮಾಹಿತಿ ನೀಡಿದ ಮೇರೆಗೆ ನಾವು ಮರುಂಗ ಠಾಣೆಯ ಪಿ.ಎಸ್.ಐ ಅವರಿಗೆ ವಾರೆಂಟನ್ನು ಕಾರ್ಯಗತ ಮಾಡಲು ಸಹಕರಿಸುವಂತೆ ಮನವಿ ಮಾಡಿದಾಗ ಅವರು ತಮ್ಮ ಸಿಬ್ಬಂದಿಯಾದ ಮನೋಜ ಕುಮಾರು ಸಿ ಅವರನ್ನು ನನ್ನ ಜೊತೆ ಕಳುಹಿಸಿಕೊಟ್ಟಿರುತ್ತಾರೆ. ನಂತರ ನಾವು ವಾರೆಂಟನೊಂದಿಗೆ ಬಡ್ಡಿಕಲಾಗ್ರಾಮಕ್ಕೆ ಹೋಗಿ 2 ನೇ ಆರೋಪಿಯ ತಂದೆಗೆ ಬೇಟಿ ಮಾಡಿದಾಗ ಅವರು ತನ್ನ ಮಗ ಸುಮಾರು 10 ವರ್ಷಗಳ ಹಿಂದೆ ಚಾಲಕನ ಕೆಲಸಕ್ಕೆ ಹೋಗಿದ್ದು ಮನೆಗೆ ಬಂದಿರುವುದಿಲ್ಲ ಎಂದು ಹೇಳಿಕೆಯನ್ನು ನೀಡಿರುತ್ತಾರೆ. ಸದರಿ ಹೇಳಿಕೆಯನ್ನು ನಿಪಿ 13 ಎಂದು ಗುರುತಿಸಲಾಯಿತು. ಸದರಿ ಗ್ರಾಮದಲ್ಲಿ ಮನೆಯ ಬಾಗಿಲಿಗೆ ವಾರೆಂಟನ ಪ್ರತಿಯನ್ನು ಅಂಟಿಸಿ ಡಂಗೊರ ಸಾರಿಸಿರುತ್ತೇನೆ. ಪಂಚನಾಮೆಯನ್ನು ನಿಪಿ 14 ಎಂದು, ಡಂಗೊರಪಡೆಸಿದ ರಶೀದಿಯನ್ನು ನಿಪಿ 15 ಎಂದು ಗುರುತಿಸಲಾಯಿತು. 2 ನೇ ಆರೋಪಿಯ ತಂದೆ ವಾಸವಿದ್ದ ಮನೆಯ ಪೋಟೊಗಳನ್ನು ನಿಪಿ 16 ಮತ್ತು 17 ಎಂದು ಗುರುತಿಸಲಾಯಿತು. ನಂತರ 2 ನೇ ಆರೋಪಿಯ ತಂದೆಗೆ ಆರೋಪಿ ಬಗ್ಗೆ ಮಾಹಿತಿ ಸಿಕ್ಕಲ್ಲಿ ಠಾಣೆಗೆ ತಿಳಿಸುವಂತೆ ಹೇಳಿ ಬಂದಿರುತ್ತೇವೆ. ಉದ್ಘೋಷಾಣಾ ವಾರೆಂಟನ ಪ್ರತಿಯನ್ನು ಸಾರ್ವಜನಿಕ ಸ್ಥಳವಾದ ಪಂಚಾಯ್ತಿ, ಬಸ್ಸ ನಿಲ್ದಾಣ, ರೈಲ್ವೆ ನಿಲ್ದಾಣ, ಪೋಲಿಸ

ಠಾಣೆ ಮತ್ತು ಸಂಚರಿಸುವ ಆಟೋಗಳಿಗೆ ಅಂಟಿಸಿ ಪೋಟೋಗಳನ್ನು ತೆಗೆದುಕೊಂಡು ಬಂದಿರುತ್ತೇನೆ. ರೈಲ್ವೆ ನಿಲ್ದಾಣದಲ್ಲಿ ತೆಗೆದ ಪೋಟೋವನ್ನು ನಿಪಿ 18 ಮತ್ತು ಎಂದು ಗುರುತಿಸಲಾಯಿತು. ಆಟೋಗೆ ವಾರೆಂಟನ್ನು ಅಂಟಿಸುವಾಗ ತೆಗೆದ ಪೋಟೋವನ್ನು ನಿಪಿ 20 ಎಂದು, ಆರ್.ಟಿ.ಓ ಕಚೇರಿ ಬಳಿ ವಾರೆಂಟನ ಪ್ರತಿಯನ್ನು ಅಂಟಿಸಿ ತೆಗೆದ ಪೋಟೋವನ್ನು ನಿಪಿ 21 ಎಂದು ಗುರುತಿಸಲಾಯಿತು.  ನಂತರ ಸದರಿ ವಾರೆಂಟಗಳನ್ನು ಮಾನ್ಯ ನ್ಯಾಯಾಲಯಕ್ಕೆ ವರದಿಯನ್ನು ಸಲ್ಲಿಸಿರುತ್ತೇನೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸ ಇದೆ.**

**ಪ್ರ.ದ.ನ್ಯಾ.ದಂ., ಸಂಡೂರು.**